ದಿನಾಂಕ: 13-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಶ್ರೀ.ಎಮ್.ಆರ್.ಬಿ. ವಾದಿ ಪರ ವಕೀಲರಿಂದಃ</u>**

ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ಸಹಿ ಮಾಡಲು ಕಲಿತಿದ್ದೇನೆ. ದಾವಾ ಆಸ್ತಿಯಲ್ಲಿ ತೋರಿಸಿರುವ ದಾವಾ ಆಸ್ತಿಗಳ ಸರ್ವೆ ನಂಬರ, ಕ್ಷೇತ್ರ ಹಾಗೂ ಊರು ಸರಿಯಾಗಿ ಇದೆ ಎಂದರೆ ಸರಿ. 9ನೇ ಪ್ರತಿವಾದಿ ಗಂಗಾಧರ ನನ್ನ ಯಜಮಾನರ ತಮ್ಮ ಕೃಷ್ಣಾಜಿ ಇವರ ಮಗ. 9ನೇ ಪ್ರತಿವಾದಿಗೆ ಕಿರಣ ತಮ್ಮ ಹಾಗೂ ಅಂಜನಿ ಮತ್ತು ಅಶ್ವಿನಿ ಅಂದರೆ ಪ್ರತಿವಾದಿ 7 ಮತ್ತು 8 ಸಹೋದರಿಯರು ಎಂದರೆ ಸರಿ. ಅದೇ ರೀತಿ ಪ್ರತಿವಾದಿ 4 ರಿಂದ 6 ರವರು ಸಹ ನನ್ನ ಯಜಮಾನರ ತಮ್ಮನಾದ ರಾಘವೇಂದ್ರ ಬೋಟೆ ಇವರ ಮಕ್ಕಳು.

2. ನನಗೆ ಮೃತ ನಾಗೇಶ, ಪ್ರತಿವಾದಿ 2 ಮತ್ತು 3 ಮಕ್ಕಳು ಎಂದರೆ ಸರಿ. ನಾನು ಈ ದಾವೆಯಲ್ಲಿ 1ನೇ ಪ್ರತಿವಾದಿ ಹಾಗೂ ನನ್ನ ಮಕ್ಕಳು 2 ಮತ್ತು 3ನೇ ಪ್ರತಿವಾದಿಯರು ಎಂದರೆ ಸರಿ. ಈ ದಾವೆಗೆ ಪ್ರತಿವಾದಿ 4, 5, 7 ರಿಂದ 10 ರವರು ಸಹ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿದ್ದಾರೆ ಎಂದರೆ ಸರಿ.

3. ಪ್ರತಿವಾದಿ 4, 5, 7 ರಿಂದ 10 ತಮ್ಮ ಲಿಖಿತ ಹೇಳಿಕೆಯಲ್ಲಿ ವಾದಿ ನನ್ನ ಮಗ ಮೃತ ನಾಗೇಶನ ಹೆಂಡತಿ ಎಂದು ಹೇಳಿದ್ದಾರೆ ಎಂದರೆ ಸರಿ. ಅದೇ ರೀತಿ ಸದರಿ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ವಾದಿಗೆ ಪಾಲು ಕೊಡಲು ತಮ್ಮದು ವಾದಿಗೆ ತಕರಾರು ಇರುವುದಿಲ್ಲವೆಂದು ಹೇಳಿದ್ದಾರೆ ಎಂದರೆ ಸರಿ.

4. ನಾವು ಸಲ್ಲಿಸಿದ ಓ.ಎಸ್.ನಂ.580/2019 ರಲ್ಲಿ ಇದ್ದ ದಾವಾ ಆಸ್ತಿಗಳು ಮತ್ತು ಈ ದಾವೆಯಲ್ಲಿಯ ದಾವಾ ಆಸ್ತಿಗಳು ಎರಡು ಒಂದೇ ಎಂದರೆ ಸರಿಯಲ್ಲ. ಮುಂದುವರೆದು ಎರಡು ದಾವೆಯಲ್ಲಿಯ ಆಸ್ತಿಗಳು ಒಂದೇ ಎಂದು ಹೇಳುತ್ತಾರೆ. ನಾನು ಹಾಗೂ ನನ್ನ ಮಕ್ಕಳು ಸೇರಿ ಓ.ಎಸ್.ನಂ.580/2019 ರಲ್ಲಿ ಈ ದಾವೆಯ 9ನೇ ಪ್ರತಿವಾದಿಯ ಮೇಲೆ ದಾವೆ ಸಲ್ಲಿಸಿದ್ದೆವು. ಸದರಿ ದಾವೆಯಲ್ಲಿಯ ಆಸ್ತಿಗಳು ಹಿರಿಯರಿಂದ ಬಂದ ಆಸ್ತಿಗಳೆಂದು ಬರೆದಿದ್ದೇವೆ ಎಂದರೆ ಸರಿ.

5. ಓ.ಎಸ್.ನಂ.580/2019 ರಲ್ಲಿ ನನ್ನ ಮಗ ನಾಗೇಶ ಮಕ್ಕಳು ಇಲ್ಲದೇ ಮೃತಪಟ್ಟಿರುತ್ತಾರೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿದಾರರು ತಮ್ಮ ಮಗ ನಾಗೇಶ ಮದುವೆಯೆ ಆಗಿಲ್ಲ ಎಂದು ಹೇಳುತ್ತಾರೆ. ಓ.ಎಸ್.ನಂ.580/2019 ರಲ್ಲಿ ಈ ದಾವೆಯ ವಾದಿ ವಿಜಯಾ ಇವರನ್ನು ಹೊರತುಪಡಿಸಿ ಉಳಿದವರೆಲ್ಲರು ಪಕ್ಷಗಾರರನ್ನಾಗಿ ಇದ್ದರು ಎಂದರೆ ಸರಿಯಲ್ಲ.

6. ನನ್ನ ಮಗ ನಾಗೇಶ ದಿಃ28/06/2019 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ಯಜಮಾನರಾದ ಸಂಬಾಜಿ ಇವರು ದಿಃ03/11/2013 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ಯಜಮಾನರ ಮರಣಾ ನಂತರ ವಾರಸಾ ಮಾಡಿಕೊಳ್ಳಲು ನಾನು, ನನ್ನ ಮಗ ಮೃತ ನಾಗೇಶ ಹಾಗೂ 2 ಮತ್ತು 3ನೇ ಪ್ರತಿವಾದಿಯರು ಅರ್ಜಿ ಕೊಟ್ಟಿದ್ದೆವು ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಾವು ಮೃತ ಸಂಬಾಜಿ ಇವರಿಗೆ ಸಂಬಂಧದಲ್ಲಿ ಏನು ಆಗುತ್ತೇವೆ ಎಂದು

ಬರೆದಿದ್ದೆವು ಎಂದರೆ ಸರಿ. ಅದೇ ರೀತಿ ನನ್ನ ಮಗನಾದ ಮೃತ ನಾಗೇಶ, ನನ್ನ ಹೆಣ್ಣು ಮಕ್ಕಳಾದ ಮಂಜುಳಾ, ನಳಿನಿ @ ಅರ್ಪಿತಾ ಇವರ ವೈವಾಹಿಕ ಸ್ಥಿತಿ ಎಂದರೆ ವಿವಾಹವಾಗಿದ್ದಾರೆ ಇಲ್ಲವೊ ಎಂದು ಬರೆದಿದ್ದೆವು ಎಂದರೆ ಸರಿ. ದಿಃ22/03/2014 ರಂದು ಉಪ-ತಹಸೀಲ್ದಾರರು ಕೌಜಲಗಿ ಇವರು ನನ್ನ ಯಜಮಾನರಾದ ಮೃತ ಸಂಬಾಜಿ ಇವರಿಗೆ ನಾನು, ನನ್ನ ಮಗ ಮೃತ ನಾಗೇಶ ಹಾಗೂ ಪ್ರತಿವಾದಿ 2 ಮತ್ತು 3 ವಾರಸುದಾರರು ಎಂದು ಮೃತರ ಕುಟುಂಬದ ಜೀವಂತ ಸದಸ್ಯರ ಧೃಡೀಕರಣ ಪತ್ರ ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರು ಸದರಿ ಪ್ರಮಾಣ ಪತ್ರ ಯಾರ ಬಳಿ ಇದೆ ಎಂದು ಪ್ರಶ್ನಿಸಿದರೆ ಅದರ ಬಗ್ಗೆ ತಮಗೆ ಗೊತ್ತಿಲ್ಲ ಹಾಗೂ ಯಾರ ಬಳಿ ಇದೆ ಎಂದು ತಮಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಮುಂದುವರೆದು ಸದರಿ ಪ್ರಮಾಣ ಪತ್ರವನ್ನು ತಮ್ಮ ವಕೀಲರ ಬಳಿ ತಮ್ಮ ಹೆಣ್ಣು ಮಕ್ಕಳು ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ.

7. ಸದರಿ ಪ್ರಮಾಣ ಪತ್ರದಲ್ಲಿ ನಾನು ಸಂಬಾಜಿ ಇವರ ವಿಧವೆ ಎಂದು ಬರೆಯಿಸಲಾಗಿದೆ ಎಂದರೆ ಸರಿ. ಅದೇ ರೀತಿ ಮಂಜುಳಾ ಹಾಗೂ ಅರ್ಪಿತಾ ಅಂದರೆ ಪ್ರತಿವಾದಿ 2 ಮತ್ತು 3 ಸಂಬಾಜಿ ಇವರ ಹೆಣ್ಣು ಮಕ್ಕಳು ಹಾಗೂ ಅವರ ಮದುವೆ ಆಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ. ನನ್ನ ಯಜಮಾನರು ತೀರಿಕೊಂಡಾಗ ನನ್ನ ಮಗ ಜೀವಿತ ಇದ್ದರು ಎಂದರೆ ಸರಿ. ಸದರಿ ಪ್ರಮಾಣ ಪತ್ರದಲ್ಲಿ ನನ್ನ ಮಗ ನಾಗೇಶ ಇವರ ವೈವಾಹಿಕ ಸ್ಥಿತಿ ವಿವಾಹಿತರು ಎಂದು ಬರೆಯಲಾಗಿದೆ ಎಂದರೆ ಸುಳ್ಳು ಬರೆಯಲಾಗಿದೆ ಎಂದು ಹೇಳುತ್ತಾರೆ. ಮೃತರ ಕುಟುಂಬದ ಜೀವಂತ ಸದಸ್ಯರ ಪ್ರಮಾಣ ಪತ್ರ ಪಡೆಯಲು ನೀವೇ ಮಾಹಿತಿ

ಕೊಟ್ಟಿದ್ದೀರಿ ಎಂದರೆ ತಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ ಮತ್ತು ತಮ್ಮ ಮಕ್ಕಳು ಮಾಹಿತಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ ಮತ್ತು ಮುಂದುವರೆದ ತಮ್ಮ ನೆಗ್ಯಾನಿ ಮಕ್ಕಳು ಮಾಡಿಸಿರಬಹುದು ಎಂದು ಹೇಳುತ್ತಾರೆ. ನನ್ನ ಮೈದುನರಾದ ರಾಮಚಂದ್ರ ಮತ್ತು ಕೃಷ್ಣಾಜಿ ಇವರ ಮಕ್ಕಳು ಮಾಡಿಸಿರಬಹುದು ಎಂದು ಹೇಳುತ್ತಾರೆ. ನನ್ನ ಯಜಮಾನರ ವಾರಸಾ ಪ್ರಮಾಣ ಪತ್ರ ಈ ಹೊತ್ತಿನವರೆಗು ರದ್ದಾಗಿಲ್ಲ ಎಂದರೆ ಸರಿ.

8. ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ ಸರ್ವೆ ನಂ.124 ಕ್ಷೇತ್ರ 16ಎ-29ಗು ಜಮೀನು ತಳಕಟ್ನಾಳ ಗ್ರಾಮದಲ್ಲಿ ಇದೆ ಎಂದರೆ ಸರಿ. ಸದರಿ ಆಸ್ತಿಯ ಉತಾರದಲ್ಲಿ ನನ್ನ ಹಾಗೂ ನನ್ನ ಹೆಣ್ಣು ಮಕ್ಕಳಾದ ಪ್ರತಿವಾದಿ 2 ಮತ್ತು 3 ರವರ ಹೆಸರು ದಾಖಲ ಇದೆ ಎಂದರೆ ಸರಿ. ನಮ್ಮ ಹೆಸರುಗಳ ಜೊತೆ ಉತಾರದಲ್ಲಿ ವಾದಿಯ ಹೆಸರು ಸಹ ಜಂಟಿಯಾಗಿ ದಾಖಲ ಇದೆ ಎಂದರೆ ಖೊಟ್ಟಿಯಾಗಿ ದಾಖಲಾಗಿದೆ ಎಂದು ಹೇಳುತ್ತಾರೆ.

9. ಓ.ಎಸ್.ನಂ.580/2019 ರಲ್ಲಿ ರಾಜಿ ಆದ ಸಮಯದಲ್ಲಿ ಸರ್ವೆ ನಂ.124 ರ ಉತಾರದಲ್ಲಿ ನನ್ನ, ಪ್ರತಿವಾದಿ 2 ಮತ್ತು 3 ರವರ ಹೆಸರುಗಳನ್ನು ಹೊರತುಪಡಿಸಿ ವಾದಿಯ ಹೆಸರನ್ನು ಸಹ ಉತಾರದಲ್ಲಿ ನಮ್ಮ ಹೆಸರಿನ ಜೊತೆ ಜಂಟಿಯಾಗಿ ದಾಖಲ ಇದ್ದ ಬಗ್ಗೆ ನಿಮಗೆ ಮಾಹಿತಿ ಇತ್ತು ಎಂದು ಪ್ರಶ್ನಿಸಿದರೆ ವಾದಿ ಖೊಟ್ಟಿಯಾಗಿ ತಮ್ಮ ಹೆಸರು ದಾಖಲ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಈಗ ಸಾಕ್ಷಿದಾರರಿಗೆ ಓ.ಎಸ್.ನಂ.580/2019 ರಲ್ಲಿ ರಾಜಿ

ಆಗುವಾಗ ಸರ್ವೆ ನಂ.124 ರ ಉತಾರದಲ್ಲಿ ವಾದಿಯ ಹೆಸರು ತಮ್ಮ ಹೆಸರಿನ ಜೊತೆ ಜಂಟಿಯಾಗಿ ಇದ್ದ ಬಗ್ಗೆ ನ್ಯಾಯಾಲಯದ ಗಮನಕ್ಕೆ ತಂದಿದ್ದೀರಾ ಎಂದು ಪ್ರಶ್ನಿಸಿದರೆ ಸಾಕ್ಷಿದಾರರು ತಾವು ರಾಜಿ ಆಗಿದ್ದಾಗಿ ಉತ್ತರಿಸುತ್ತಾರೆ. ವಾದಿ ನಮ್ಮ ಹೆಸರುಗಳ ಜೊತೆ ಸರ್ವೆ ನಂ.124 ರಲ್ಲಿ ಯಾವ ದಾಖಲೆಗಳನ್ನು ಕೊಟ್ಟು ತಮ್ಮ ಹೆಸರು ಹಚ್ಚಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

10. ಓ.ಎಸ್.ನಂ.580/2019 ಸನ್ 2020 ರಲ್ಲಿ ರಾಜಿಯಾಗಿದೆ ಎಂದರೆ ನನಗೆ ಹೇಳಲಾಗುವುದಿಲ್ಲ. ಓ.ಎಸ್.ನಂ.580/2019 ರಲ್ಲಿ ಆದ ಡಿಕ್ರೀಯ ಪ್ರಕಾರ ಉತಾರಗಳಲ್ಲಿ ಹೆಸರುಗಳು ದಾಖಲ ಆಗಿಲ್ಲ ಎಂದರೆ ಸರಿಯಲ್ಲ. ನಾಗೇಶ ಇವರ ಮರಣಾ ನಂತರ ನಮ್ಮ ಜಮೀನುಗಳನ್ನು ನನ್ನ ಇಬ್ಬರು ಹೆಣ್ಣು ಮಕ್ಕಳಾದ ಪ್ರತಿವಾದಿ 2 ಮತ್ತು 3 ರವರಿಗೆ ಮಾಡಿಕೊಟ್ಟಿರುತ್ತೇನೆ. ನಾನು ಹಿರಿಯರ ಸಮಕ್ಷಮ ನನ್ನ ಜಮೀನುಗಳನ್ನು ನನ್ನ ಹೆಣ್ಣು ಮಕ್ಕಳಿಗೆ ಮಾಡಿಸಿ ಕೊಟ್ಟಿರುತ್ತೇನೆ.

11. ನನ್ನ ಮಗ ನಾಗೇಶ ಇವರ ಮರಣಾ ನಂತರ ಸದರಿ ನಾಗೇಶ ಇವರಿಗೆ ನಾನು ಮತ್ತು ವಾದಿ ವಾರಸುದಾರರು ಇದ್ದೇವೆ ಎಂದು ಹೇಳಿ ವಾರಸಾ ಪ್ರಮಾಣ ಪತ್ರ ಕೊಡಲು ಅರ್ಜಿ ಕೊಟಟಿದ್ದೆವು ಎಂದರೆ ಸಾಕ್ಷಿದಾರರು ತಮ್ಮ ಮಗ ನಾಗೇಶ ಇವರ ಮದುವೆ ಆಗಿರುವುದಿಲ್ಲ ಎಂದು ಹೇಳುತ್ತಾರೆ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ